# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 737 |
| ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಟಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 12-12-2025 |
| ಉತ್ತರಿಸುವವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳೆಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1245 ಮೆಟ್ರಿಕ್ ಪೂರ್ವ ಹಾಗೂ 1414 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳಲ್ಲಿ ಕ್ರಮವಾಗಿ 67303 ಹಾಗೂ 183338 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲಾಗಿರುತ್ತದೆ.<br><br>ಜಿಲ್ಲಾವಾರು ವಿದ್ಯಾರ್ಥಿ ನಿಲಯಗಳಲ್ಲಿನ ಮಂಜೂರಾತಿ ಸಂಖ್ಯೆ ಮತ್ತು ಪ್ರವೇಶ ಪಡೆದಿರುವ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಈ ವಿದ್ಯಾರ್ಥಿ ನಿಲಯಗಳಲ್ಲಿ ಇರುವ ಸೀಟುಗಳ ಸಂಖ್ಯೆ ಎಷ್ಟು; ಎಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. | |
| ಇ) | ತುಮಕೂರು ಜಿಲ್ಲೆಯಲ್ಲಿ ಅತೀ ಹಿಂದುಳಿದ (MBC) ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 57 ಮೆಟ್ರಿಕ್ ಪೂರ್ವ ಹಾಗೂ 66 ಮೆಟ್ರಿಕ್ ನಂತರದ ಹೀಗೆ ಒಟ್ಟು 123 ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಕ್ರಮವಾಗಿ 2900 ಹಾಗೂ 8411 ಒಟ್ಟು 11311 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲಾಗಿರುತ್ತದೆ.<br><br>2025-26ನೇ ಶೈಕ್ಷಣಿಕ ಸಾಲಿನಲ್ಲಿ ತುಮಕೂರು ಜಿಲ್ಲೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ 1458 ನವೀಕರಣ ವಿದ್ಯಾರ್ಥಿಗಳಿದ್ದು, ಖಾಲಿ ಉಳಿದಿರುವ 1442 ಸ್ಥಾನಗಳಿಗೆ ಅನುಗುಣವಾಗಿ 1678 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 1442 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗಿದ್ದು, 236 ಅರ್ಜಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.<br><br>ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 4351 ನವೀಕರಣ ವಿದ್ಯಾರ್ಥಿಗಳಿದ್ದು, ಖಾಲಿ ಉಳಿದಿರುವ 4065 ಸ್ಥಾನಗಳಿಗೆ ಅನುಗುಣವಾಗಿ 7204 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 4065 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗಿದ್ದು, 3139 ಅರ್ಜಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. |

...2..

| | | |
|---|---|---|
| ಈ) | ಬಂದಿದ್ದಲ್ಲಿ ಅತೀ ಹಿಂದುಳಿದ (MBC) ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯದೇ ಅವರ ವಿದ್ಯಾಭ್ಯಾಸ ಕುಂಠಿತವಾಗುವುದಿಲ್ಲವೆ; ಇದಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ನಿಗಧಿಪಡಿಸಿರುವ ಮಂಜೂರಾತಿ ಸಂಖ್ಯೆಗನುಗುಣವಾಗಿ ಮೆರಿಟ್ ಮತ್ತು ಪ್ರವರ್ಗವಾರು ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿರುತ್ತದೆ. ಮುಂದುವರೆದು, ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಅನುದಾನದ ಲಭ್ಯತೆಯನುಸಾರ ಮಾಸಿಕ ರೂ.1500/-ರಂತೆ 10 ತಿಂಗಳ ಅವಧಿಗೆ ರೂ.15000/-ಗಳನ್ನು ಮಂಜೂರು ಮಾಡಲಾಗುತ್ತಿದೆ. |
| ಉ) | ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ ಅತೀ ಹಿಂದುಳಿದ (MBC) ವಿದ್ಯಾರ್ಥಿಗಳಿಗೆ ನಿಲಯಗಳ ಪ್ರವೇಶ ನೀಡಬೇಕಾಗಿರುವುದು ಸರ್ಕಾರದ ಆದ್ಯತೆಯಲ್ಲವೇ; ಈ ರೀತಿ ವಿದ್ಯಾರ್ಥಿಗಳಿಗೆ ತೊಂದರೆ ಯಾಗಲು ಕಾರಣಕರ್ತರು ಯಾರು? | ಇಲಾಖೆಯಡಿ 1245 ಮೆಟ್ರಿಕ್ ಪೂರ್ವ ಹಾಗೂ 1414 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಮಂಜೂರಾತಿ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿ ನಿಲಯಗಳಲ್ಲಿ ನಿಗಧಿಪಡಿಸಿರುವ ಮೆರಿಟ್ ಮತ್ತು ಪ್ರವರ್ಗವಾರು ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿರುತ್ತದೆ. |

ಸಂಖ್ಯೆ: ಹಿಂವಕ 1215 ಬಿಎಂಎಸ್ 2025

(ಶಿವರಾಜ.ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ ಶ್ರೀನಿವಾಸ್ (ಡಿ.ಟಿ.ಎಸ್) ಇವರ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:737ಕ್ಕೆ ಅನುಬಂಧ

### ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಜಿಲ್ಲಾವಾರು ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮತ್ತು ಪ್ರವೇಶ ಪಡೆದಿರುವ ವಿವರಗಳು

| ಕ್ರ. ಸಂ | ಜಿಲ್ಲೆಯ ಹೆಸರು | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ಪ್ರವೇಶ ಪಡೆದ ಸಂಖ್ಯೆ | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ಪ್ರವೇಶ ಪಡೆದ ಸಂಖ್ಯೆ |
|---|---|---|---|---|---|---|---|
| 1 | ಬಾಗಲಕೋಟೆ | 43 | 2840 | 2740 | 49 | 6788 | 6189 |
| 2 | ಬಳ್ಳಾರಿ | 20 | 1215 | 1207 | 33 | 4461 | 4285 |
| 3 | ಬೆಳಗಾವಿ | 99 | 5195 | 4637 | 70 | 9700 | 8399 |
| 4 | ಬೆಂಗಳೂರು ನಗರ | 16 | 700 | 574 | 19 | 2119 | 1802 |
| 5 | ಬೆಂಗಳೂರು ಗ್ರಾಮಾಂತರ | 1 | 50 | 34 | 66 | 8397 | 7976 |
| 6 | ಬೀದರ | 38 | 2152 | 2145 | 40 | 5115 | 4552 |
| 7 | ಚಾಮರಾಜನಗರ | 12 | 530 | 498 | 22 | 2528 | 2042 |
| 8 | ಚಿಕ್ಕಬಳ್ಳಾಪುರ | 31 | 1625 | 1456 | 31 | 4138 | 3420 |
| 9 | ಚಿಕ್ಕಮಗಳೂರು | 56 | 2950 | 2909 | 47 | 6306 | 5379 |
| 10 | ಚಿತ್ರದುರ್ಗ | 42 | 2255 | 2197 | 67 | 8244 | 7759 |
| 11 | ದಕ್ಷಿಣ ಕನ್ನಡ | 21 | 1005 | 990 | 61 | 7726 | 6863 |
| 12 | ದಾವಣಗೆರೆ | 35 | 1875 | 1831 | 52 | 6982 | 6453 |
| 13 | ಧಾರವಾಡ | 25 | 1195 | 1068 | 59 | 7525 | 6681 |
| 14 | ಗದಗ | 32 | 1840 | 1807 | 36 | 4755 | 4138 |
| 15 | ಹಾಸನ | 62 | 3200 | 2921 | 60 | 8021 | 7169 |
| 16 | ಹಾವೇರಿ | 45 | 2395 | 2342 | 40 | 5218 | 4422 |

| | | | | | | | |
|---|---|---|---|---|---|---|---|
| 17 | ಕಲಬುರಗಿ | 73 | 3930 | 3883 | 63 | 7994 | 7223 |
| 18 | ಕೊಡಗು | 19 | 755 | 557 | 23 | 2450 | 1810 |
| 19 | ಕೋಲಾರ | 25 | 1346 | 1276 | 36 | 3601 | 2737 |
| 20 | ಕೊಪ್ಪಳ | 42 | 2670 | 2678 | 43 | 5724 | 4646 |
| 21 | ಮಂಡ್ಯ | 62 | 3350 | 3166 | 54 | 6861 | 6495 |
| 22 | ಮೈಸೂರು | 41 | 1810 | 1719 | 67 | 8910 | 8193 |
| 23 | ರಾಯಚೂರು | 36 | 2040 | 1831 | 38 | 5088 | 4689 |
| 24 | ರಾಮನಗರ | 25 | 1058 | 1017 | 28 | 3181 | 2648 |
| 25 | ಶಿವಮೊಗ್ಗ | 57 | 3091 | 3067 | 82 | 11330 | 10603 |
| 26 | ತುಮಕೂರು | 57 | 2900 | 2830 | 66 | 8411 | 7297 |
| 27 | ಉಡುಪಿ | 18 | 990 | 953 | 29 | 4094 | 3743 |
| 28 | ಉತ್ತರಕನ್ನಡ | 68 | 3826 | 3754 | 37 | 4750 | 3988 |
| 29 | ವಿಜಯನಗರ | 36 | 2515 | 2404 | 32 | 4395 | 4065 |
| 30 | ವಿಜಯಪುರ | 64 | 3610 | 3465 | 41 | 5613 | 4913 |
| 31 | ಯಾದಗಿರಿ | 44 | 2390 | 2206 | 23 | 2913 | 2465 |
| | **ಒಟ್ಟು** | **1245** | **67303** | **64162** | **1414** | **183338** | **163044** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು